ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

# ಸಿ.ಸಿ. ಸಂಖ್ಯೆ: 320/2014

| | | | |
|---|---|---|---|
| ಸಾಕ್ಷಿದಾರರ ಹೆಸರು | ಜಯಣ್ಣ ಜಿ ಎಂ | ಪ್ರಮಾಣ ಮಾಡಿದ ದಿನಾಂಕ | 15.04.2023 |
| ತಂದೆಯ ಹೆಸರು | ಮಾಧವಾಚಾರ್ | | |
| ವಯಸ್ಸು | 48 ವರ್ಷ | | |
| ವೃತ್ತಿ | ಗಸ್ತು ಅರಣ್ಯ ಪಾಲಕ<br>ಬೇಲೂರು<br>ಹಾಸನ ಜಿಲ್ಲೆ | ಚಾಸಾ | 6 |
| ವಾಸಸ್ಥಳ | ಬೇಲೂರು | ಫ್ರಾಸಾ | 2 |

## EVIDENCE BEFORE CHARGE

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :-**

ನಾನು 2005 ರಿಂದ 2010 ರವರೆಗೆ ಮದ್ದೂರು ಅರಣ್ಯ ವಲಯದಲ್ಲಿ ಅರಣ್ಯ ವೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 17.12.2008 ರಂದು ಹುಲಿ ಯೋಜನೆ ವಿಭಾಗದ ಮದ್ದೂರು ವಲಯದ ಮದ್ದೂರು ಶಾಖೆಯ ಬಿದಿರುತಾಳು ಗಸ್ತಿನ ಬಂಕೇಗೌಡನಕಟ್ಟೆ ಅರಣ್ಯ ಪ್ರದೇಶದಲ್ಲಿ ನಾನು, ಚಾಸಾ 2, ಚಾಸಾ 3, ಚಾಸಾ 5, ಚಾಸಾ 1 ರವರು ಮದ್ದೂರು ವಲಯದ ಅರಣ್ಯ ಪ್ರಕರಣ ಸಂಖ್ಯೆ 7/2008-09 ರ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ 1 ರಿಂದ 4 ನೇ ಆರೋಪಿಗಳನ್ನು ವಲಯದ ಕಛೇರಿಯಲ್ಲಿ ವಿಚಾರ ಮಾಡಲಾಗಿ ಅವರುಗಳು ಜಿಂಕೆಯನ್ನು ಹತ್ಯೆ ಮಾಡಿರುವ ಸ್ಥಳವನ್ನು ತೋರಿಸುವುದಾಗಿ ತಿಳಿಸಿರುತ್ತಾರೆ. ಅದರಂತೆ ನಾವುಗಳು ಅವರ ಜೊತೆಯಲ್ಲಿ

ಜಿಂಕೆಯನ್ನು ಹತ್ಯೆ ಮಾಡಿರುವ ಸ್ಥಳಕ್ಕೆ ಹೋಗಿರುತ್ತೇವೆ. ಆರೋಪಿಗಳು ಮುಂದೆ - ಮುಂದೆ ಕರೆದುಕೊಂಡು ಹೋಗಿ ಸ್ಥಳ ತೋರಿಸಿರುತ್ತಾರೆ. ಸದರಿ ಸ್ಥಳವು ಬಂಕೇಗೌಡನಕಟ್ಟೆ ಅರಣ್ಯ ಪ್ರದೇಶವಾಗಿರುತ್ತದೆ. 1 ನೇ ಆರೋಪಿಯು ಜಿಂಕೆಯನ್ನು ಗುಂಡಿಟ್ಟು ಹತ್ಯೆ ಮಾಡಿರುವುದಾಗಿ ಆರೋಪಿಗಳು ಹೇಳಿರುತ್ತಾರೆ. ಹತ್ಯೆ ಮಾಡಿದ ಜಿಂಕೆಯನ್ನು 3 ನೇ ಆರೋಪಿಯೊಂದಿಗೆ ಸೇರಿ 1 ನೇ ಆರೋಪಿ ಕುತ್ತಿಗೆ ಕತ್ತರಿಸಿ ಬಿಸಾಕಿಸಿರುತ್ತಾರೆ. ನಂತರ ಜಿಂಕೆಯ ನಾಲ್ಕು ಕಾಲುಗಳನ್ನು ಈ ಇಬ್ಬರು ಕತ್ತರಿಸಿರುತ್ತಾರೆ ಎಂಬುದಾಗಿ ಹೇಳಿರುತ್ತಾರೆ. ಜಿಂಕೆಯ ಹೊಟ್ಟೆಯನ್ನು ಬಗೆದು ಕರಳನ್ನು ಬಿಸಾಕಿರುತ್ತಾರೆ ಎಂಬುದಾಗಿ ತಿಳಿಸಿರುತ್ತಾರೆ. ನಂತರ ಜಿಂಕೆಯ ದೇಹವನ್ನು ಎರಡು ಭಾಗಗಳಾಗಿ ಕತ್ತರಿಸಿ ಹೊತ್ತುಕೊಂಡು ಹೋಗಿ ಕಾರಿನ ಡಿಕ್ಕಿಯಲ್ಲಿ ಇಟ್ಟಿರುತ್ತಾರೆಂದು ನಮಗೆ ತಿಳಿಸಿರುತ್ತಾರೆ. ಆ ಜಿಂಕೆಯನ್ನು ಇಟ್ಟಂತಹ ಕಾರಿನ ಸಂಖ್ಯೆ ಕೆಎಲ್ 10 ಇ 5072 ಎಂಬುದಾಗಿ ಹೇಳಿರುತ್ತಾರೆ. ಆ ವೇಳೆಯಲ್ಲಿ ಕಾರಿನ ಚಾಲಕ ಅಜ್ಮಲ್ ಬಿನ್ ಮೊಹಮ್ಮದ್, ಕೇರಳ ರಾಜ್ಯ ಎಂಬುದಾಗಿ ಹೇಳಿರುತ್ತಾರೆ.

ನಂತರ ಕೇರಳ ಅರಣ್ಯ ಇಲಾಖೆಯವರು ನಮ್ಮಗಳನ್ನು ಹಿಡಿಯುವ ಸಂದರ್ಭದಲ್ಲಿ ವಾಹನ ಚಾಲಕರಾದ ಅಜ್ಮಲ್ ಓಡಿಹೋಗಿ ತಲೆಮರೆಸಿಕೊಂಡಿರುತ್ತಾನೆ ಎಂಬುದಾಗಿ ಹೇಳಿರುತ್ತಾರೆ. ಸದರಿ ಸ್ಥಳದಲ್ಲಿ ರಕ್ತದ ಕಲೆಗಳು ಮಣ್ಣಿನ ಮೇಲೆ ಬಿದ್ದಿರುವುದು ಕಂಡುಬಂದಿರುತ್ತದೆ. ಸದರಿ ಸ್ಥಳವು ಮೊದಲನೇ ಮಹಜರ್ ನಲ್ಲಿರುವ ಸ್ಥಳವೇ ಆಗಿರುತ್ತದೆ. ಈ ಸಂಬಂಧ ಜಿಂಕೆಯ ಉಳಿದ ಎರಡು ಕಾಲುಗಳು ಸದರಿ ಆರೋಪಿಗಳು ತೋರಿಸಿದ ಸ್ಥಳದಲ್ಲಿ ಸಿಕ್ಕಿರುತ್ತವೆ.

ಸದರಿ ಸ್ಥಳದ ಚೆಕ್ಕುಬಂದಿ ಪೂರ್ವಕ್ಕೆ 150 ಮೀಟರ್ ದೂರದಲ್ಲಿ ಮೊದಲನೇ ಚೈನ್ ಗೇಟ್ ಜೀಪ್ ರಸ್ತೆ, ಪಶ್ಚಿಮಕ್ಕೆ 300 ಮೀ. ದೂರದಲ್ಲಿ 2 ನೇ ಚೈನ್ ಗೇಟ್ ಜೀಪ್ ರಸ್ತೆ, ಉತ್ತರಕ್ಕೆ 200 ಮೀ. ದೂರದಲ್ಲಿ ಬಂಕೇಗೌಡನಕಟ್ಟೆ ಹಳ್ಳ, ದಕ್ಷಿಣಕ್ಕೆ 30 ಮೀ. ದೂರದಲ್ಲಿ ರಾಷ್ಟ್ರೀಯ ಹೆದ್ದಾರಿ ಸಂ. 212 ಇರುತ್ತದೆ. ಸದರಿ ಮಹಜರನ್ನು ಬೆ. 10 ರಿಂದ 10.45 ರವರೆಗೆ ಮಾಡಿರುತ್ತೇವೆ. ಸದರಿ ವಿಚಾರವಾಗಿ ಹಿಂದಿನ ದಿನ ಆರೋಪಿ 1 ರಿಂದ 3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇವೆ. ಆ ಹೇಳಿಕೆಗಳನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಸಮಕ್ಷಮ ನಾನೇ ಬರವಣಿಗೆ ಮಾಡಿಕೊಂಡಿರುತ್ತೇನೆ. ಆ ಕಾರನ್ನು ನೋಡಿದರೆ ಗುರ್ತಿಸಬಲ್ಲೆ. ವಶಪಡಿಸಿಕೊಂಡ ಕಾಲುಗಳನ್ನು ನೋಡಿದರೆ ಗುರ್ತಿಸಬಲ್ಲೆ, ಆದರೆ ಅವುಗಳನ್ನು ಅನುಮತಿಯ ಮೇರೆಗೆ ನಾಶಪಡಿಸಲಾಗಿದೆ. ಆರೋಪಿಗಳನ್ನು ನೋಡಿದರೆ ಗುರ್ತಿಸಬಲ್ಲೆ. ಈ ದಿನ

ನ್ಯಾಯಾಲಯದ ಮುಂದಿರುವ 1 ಮತ್ತು 2 ನೇ ಆರೋಪಿಗಳನ್ನು ನೋಡಿ ಗುರ್ತಿಸಿರುತ್ತಾರೆ. 3 ನೇ ಆರೋಪಿ ಗೈರು ಹಾಜರಿದ್ದು ಗುರ್ತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ನುಡಿದ ಕಾರಣ ಅವರ ವಿನಾಯಿತಿ ಅರ್ಜಿಯನ್ನು ಪುರಸ್ಕರಿಸಲಾಯಿತು. 4 ನೇ ಆರೋಪಿಯು ಮೃತಪಟ್ಟಿರುತ್ತಾರೆ.

ಮಹಜರ್ ಗೆ ಆರೋಪಿಗಳ ಸಹಿಯನ್ನು ಪಡೆದುಕೊಂಡಿರುತ್ತೇವೆ. ಸಾಕ್ಷಿಯು ನಿಪಿ 3 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 3(ಬಿ) ಎಂದು ಗುರ್ತಿಸಲಾಯಿತು. ನಿಪಿ 3 ರ ಬರವಣಿಗೆಯಾದ ನಂತರ ಆರೋಪಿಗಳು ನಿಪಿ 3 ಕ್ಕೆ ಸಹಿ ಮಾಡಿರುತ್ತಾರೆ ಎಂದು ನೋಡಿ ಗುರ್ತಿಸಿರುತ್ತಾರೆ. ಆ ಸಹಿಗಳನ್ನು ನೋಡಿ ಗುರ್ತಿಸಿದ ಕಾರಣ ಅವುಗಳನ್ನು ನಿಪಿ 3 (ಸಿ) ಯಿಂದ ನಿಪಿ 3(ಎಫ್) ಎಂದು ಗುರ್ತಿಸಲಾಯಿತು. ಸಾಕ್ಷಿಯು ನಿಪಿ 4 ರ ಫೋಟೋವನ್ನು ನೋಡಿ ಗುರ್ತಿಸಿರುತ್ತಾರೆ ಮತ್ತು ಇದೇ ಕಾರು ಎಂದು ನುಡಿಯುತ್ತಾರೆ.

**ಪಾಟೀ ಸವಾಲು :- ದೋಷಾರೋಪಣಾ ರಚಿಸಿದ ನಂತರ ಪಾಟೀ ಸವಾಲು ಮಾಡಲು ಕೋರಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ